ಏ) ಈ ಯೋಜನೆಗೆ ಪ್ರಸ್ತಾಪಿಸಿರುವ ಜಮೀನು ಈ ಇಲಾಖೆಗೆ ವರ್ಗಾವಣೆಯಾದ ನಂತರ ಮತ್ತು ಸಚಿವ ಸಂಪುಟದ ಅನುಮೋದನೆಯ ನಂತರ ಪ್ರಾರಂಭಿಸಲಾಗುವುದು.

ಬೆಂಗಳೂರು ನಗರದಲ್ಲಿರುವ ಮುಜರಾಯಿ ದೇವಸ್ಥಾನಗಳ ಆಸ್ತಿ ಮಾರಾಟ

211 (138) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಒಟ್ಟು ಮುಜರಾಯಿ ದೇವಸ್ಥಾನಗಳೆಷ್ಟು;

ಆ) ಈ ದೇವಸ್ಥಾನಗಳಿಗೆ ಸೇರಿದ ಭೂಮಿ ಎಷ್ಟು;

ಇ) ಇವುಗಳ ಪೈಕಿ ಎಷ್ಟು ಪ್ರದೇಶವನ್ನು ಪರಭಾರೆ ಮಾಡಲಾಗಿದೆ;

ಈ) ಎಷ್ಟು ಪ್ರದೇಶವನ್ನು ಗುತ್ತಿಗೆಗೆ ಶಿಕ್ಷಣ ಸಂಸ್ಥೆಗಳು ಹಾಗೂ ಸಾಮಾಜಿಕ ಸಂಸ್ಥೆಗಳಿಗೆ ನೀಡಲಾಗಿದೆ;

ಉ) ಪ್ರತಿಯೊಂದು ಸಂಸ್ಥೆಗೆ ಯಾವ ದರದಲ್ಲಿ ಗುತ್ತಿಗೆಗೆ ನೀಡಲಾಗಿದೆ;

ಊ) ಗುತ್ತಿಗೆಗೆ ಪಡೆದಂಥ ಸಂಸ್ಥೆಗಳು ವಾಣಿಜ್ಯೋದ್ಯಮ ಕಟ್ಟಡಗಳನ್ನು ನಿರ್ಮಿಸಿ ಆಂಗ್ಲ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಋ) ಸರ್ಕಾರ ಈ ಗುತ್ತಿಗೆ ದರವನ್ನು ಪುನರ್ ವಿಮರ್ಶಿಸಲು ನಿರ್ಧರಿಸಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಅ) ಬೆಂಗಳೂರು ನಗರ ನಗರಸಭಾ ವ್ಯಾಪ್ತಿಯಲ್ಲಿ ಒಟ್ಟು 52 ಅಧಿಸೂಚಿತ ಸಂಸ್ಥೆಗಳು ಈ ಇಲಾಖೆಯ ವ್ಯಾಪ್ತಿಗೆ ಬರುತ್ತವೆ.

ಆ) ಈ ದೇವಾಲಯಗಳಿಗೆ (ದೇವಸ್ಥಾನ ಹೊರತುಪಡಿಸಿ) ಒಟ್ಟು 183541.58 ಚದರ ಮೀಟರ್ ವಿಸ್ತೀರ್ಣ ಭೂಮಿ ಇದೆ.

ಇ) ಈ ಜಮೀನಿನ ಪೈಕಿ 1438.896 ಚದರ ಮೀಟರ್ ವಿಸ್ತೀರ್ಣದ ಜಾಗವನ್ನು ಪರಭಾರೆ ಮಾಡಲಾಗಿದೆ.

ಈ) ಶಿಕ್ಷಣ ಸಂಸ್ಥೆಗಳಿಗಾಗಿ 7479.064 ಚದರ ಮೀಟರ್ ವಿಸ್ತೀರ್ಣದ ಜಮೀನನ್ನು ಗುತ್ತಿಗೆಗೆ ನೀಡಲಾಗಿದೆ.

ಉ) ಸರ್ಕಾರದ ಗುತ್ತಿಗೆ ಮಾರ್ಗಸೂಚಿ ಆದೇಶ ಸಂ. ಕಂಇ/66/ಮುಆಬಿ/99, ದಿನಾಂಕ 11-4-2001 ಮತ್ತು 1-8-2001ರಲ್ಲಿ ನಿಗಧಿಪಡಿಸಿರುವ ವಾಣಿಜ್ಯ ಮತ್ತು ವಾಣಿಜ್ಯೇತರ ಉದ್ದೇಶಗಳಿಗಾಗಿ ನಿಯಮಾನುಸಾರ ಗುತ್ತಿಗೆಗೆ ನೀಡಲಾಗಿದೆ. ದಿನಾಂಕ 1-5-2003ರಿಂದ ಜಾರಿಗೆ ಬಂದಿರುವ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ನಿಯಮ 2002ರಡಿ ವಿಧಿಸಿರುವ ಷರತ್ತಿನಂತೆ ಇನ್ನು ಮುಂದೆ ಬಹಿರಂಗ ಹರಾಜು ಮೂಲಕ ಬಾಡಿಗೆ ಆಧಾರದ ಮೇಲೆ ಗುತ್ತಿಗೆಗೆ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಊ) ಬಂದಿರುವುದಿಲ್ಲ.

ಋ) ಇಲ್ಲ.

ರಾಜ್ಯದಲ್ಲಿ ರೆವಿನ್ಯೂ ಸ್ಟ್ಯಾಂಪುಗಳ ಕೊರತೆ

212 (140) ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಂದು ರೂ. ಮೌಲ್ಯದ ರೆವಿನ್ಯೂ ಸ್ಟ್ಯಾಂಪುಗಳು ಅಂಚೆ ಕಛೇರಿಗಳಲ್ಲಿ ಲಭ್ಯವಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;